01

# Karnataka Power Transmission Corporation Limited
## Departmental Examination – August 2018
## SAS PART-I PAPER -1
**(English/Kannada-Precise Writing & Drafting)**
**(Books, Guide, Notes etc. Are Not Allowed)**

**Date : 27.08.2018** **Maximum Marks : 100** **Time : 9:30 am TO 12:30 pm**

---

## PART-A

**1. Write a precise of the following Passage in about one-third of its length in your own words with a suitable title.** **25**

Now that the mammoth is extinct, elephant is the largest of all animals living and the strongest. It is a strange-looking animal, with its thick legs, huge sides and back, large hanging ears, small tail, little eyes, long white tusks, and above all, its long nose, called the trunk. The trunk is the elephant's peculiar feature, and it puts it to various uses. It draws up water by its trunk, and can squirt it all over its body like shower bath ; and with it, it picks leaves from the trees and puts them into its mouth. In fact, its trunk serves the elephant as a long arm and hand. Elephants look very clumsy and heavy, and yet they can move very quickly when they like.

Elephants are found in India and in Africa. The African elephant differs in some points from the Indian, being larger, with longer tusks and bigger ears. In fact the two are considered to be different species. In both countries, they live in herds in the jungles, and are naturally shy animals that keep away from men. Elephants, with their great size and strength, are fine advertisement for vegetarianism, for they live entirely on leaves of trees, grass, roots and bulbs.

The elephant is a very intelligent animal, and its intelligence combined with its great strength, makes it, when tamed, a very useful servant to man; and it has been trained to serve in various ways.

Elephants can carry heavy loads about a thousand seers each; and they are used to draw heavy wagons and big guns that would require many horses. They are very skillful, too, in pilling timber. The trained elephant will kneel down, lift a heavy log of wood with its tusks, carry it to the place where it is wanted, and lays it exactly in position.

Elephants are also trained for tiger-hunting. The huntsmen sit in the howdah on the back of the elephant, which is driven and guided by the driver, called the mahout, who squats on its neck. In this way the hunters are carried through the thickest and at such a height that they can see and fire at the tiger when it is driven out.

In old days elephants were used in the battles, and all Indian Rajas had their regiments of trained fighting elephants. And they still have their place in state processions, when they are painted with bright colors and covered with silk and velvet clothes.

In Africa elephants are hunted mainly for their tusks, which are made of ivory and very valuable. Their skins are so thick that an ordinary bullet will not pierce them; and so large guns, called elephant – guns, are used to kill the animals.

Many elephants are caught alive to be tamed and trained. But catching elephants alive is difficult and dangerous work; for ; though the elephant is a shy, wild animal when left alone, it can be a dangerous enemy when attacked. Elephants are generally caught alive in great traps or enclosures, called keddahs. They are either driven in got these keddahs, or led into them by tame elephants, called decoys, which are trained to lead their wild brothers into captivity.

**2. Read the following passage and answer the questions that follow** **15**

It has been part of Nelson's prayer that the British fleet might be distinguished by humanity in the victory which he expected. Setting an example himself, he twice gave orders to cease firing upon the Redoubtable supposing that she had struck because her great guns were silent; for as she carried no flag, there was no means of instantly ascertaining the fact. From this ship which he had thus twice spared he received his death. A ball fired from her mizzen –top which, in the then situation of the two vessels was not more than fifteen yards from that part of the deck where he was standing, struck the epaulette on his left shoulder about a quarter after one, just in the heat of action. He fell upon his face on the spot which was covered with his poor secretary's blood. Hardy, who was a few steps from him turning round, saw three men raising him up. "They have done for me at last Hardy!" said he. "I hope not!" cried Hardly. "Yes," he replied; "my back bone is shot through!" Yet even now, not for a moment losing his presence of mind he observed as they were carrying him down the ladder, that the tiller-ropes which had been shot away, were not yet replaced and ordered that

new ones should be roped immediately. Then that he might not be seen by the crew he took out his handkerchief and covered his face and his stars. Had he but concealed these badges of honor from the enemy, England perhaps would not have had cause to receive with sorrow the news of the battle of Trafalgar. The cockpit was crowded with wounded and dying men over whose bodies he was with some difficulty conveyed, and laid upon a pallet in the midshipmen's berth. It was with soon perceived, upon examination, that the wound was mortal. This however, was concealed from all, except Captain Hardy, the chaplain, and the medical attendants. He himself being certain, from the sensation in his back, and the gush of blood he felt momently within his breast, that no human care could avail him, insisted that the surgeon should leave him and attend to those to whom he might be useful.

Questions.

1. What is meant by 'supposing that she had struck'?
2. How can Nelson be said to have been partly responsible for his own death?
3. What do you understand by the 'mizzen-top'?
4. Why did Nelson insist that the surgeon should leave him and attend to others?
5. What qualities in Nelson's character are revealed by this passage?

**3. Change the following from the Active voice to Passive voice.** **05**

1. He will finish the work in a fortnight.
2. Some boys were helping the wounded man.
3. The peon opened the gate.
4. The mason is building the wall.
5. The cat killed the mouse.

**4. Choose the Correct 'Verb form' from those in Brackets** **05**

1. He _________ a mill in this town. (have, has, is having).
2. He _________ asleep while he was driving. (falls, fell, has fallen).
3. It started to rain while we _______ tennis. (are playing, were playing, had played).
4. My friend's _________ prime minister yesterday. (see, have seen, saw).
5. The Earth ________ round the Sun. (move, moves, moved).

## PART B

**5.** Draft a Board order regarding Enhancing the ceiling limit of Retirement Gratuity / Death Gratuity from Rs. 3.50 Lakhs to 10.00 Lakhs. **10**

**6.** Draft a Board Order regarding approval to extend the facility of payment of Rs.17,000/- per month towards fuel and maintenance charges of Personal Vehicles to the eligible officers. **10**

**7.** Draft a circular from Deputy General Manager (Tech) regarding procurement of T&P articles. **10**

**8.** Draft a Circular from Financial Advisor (A&R) regarding Sanction of estimates to all CEs, Transmission Zone, SEE's, Works & Maintenance Circle and EE's of TL&SS / Major Works Division, KPTCL. **05**

**9.** Draft a Circular from Director (A&HR) to all Financial Advisors and Controllers of Accounts of KPTCL regarding strengthening the security of cheque issued. **05**

**10.** Draft a letter and model ready reckoner to all O&M Chief Engineer (Elecl.) of BESCOM from General Manager (Finance & Tariff), regarding collection of 2MMD as per ready reckoner, effective from May 2017. **10**

# ಕನ್ನಡ

## ಭಾಗ–ಎ

**1) ಈ ಕೆಳಗಿನ ಲೇಖನವನ್ನು ಓದಿ 3ನೇ ಒಂದರಷ್ಟಕ್ಕೆ ಸೀಮಿತಗೊಳಿಸಿ ಬರೆಯಿರಿ ಮತ್ತು ಸೂಕ್ತ ಶಿರೋನಾಮ ಬರೆಯಿರಿ.** **25**

ಪ್ರಿಯತಮೆ ತುಂಬ ನಾಚುತ್ತಿದ್ದಾಳೆ. ಅವಳ ಸಂಕೋಚ ಪ್ರಿಯಕರನ ಪ್ರೀತಿಯ ಅಭಿವ್ಯಕ್ತಿಗೆ ಅಡ್ಡಿಯನ್ನುಂಟು ಮಾಡುತ್ತಿದೆ. 'ನಮಗೆ ಬೇಕಾದಷ್ಟು ಸಮಯವಿದ್ದಿದ್ದರೆ ನಿನ್ನ ಸಂಕೋಚ ದೊಡ್ಡ ಅಪರಾಧವೇನಾಗಿರಲಿಲ್ಲ ಗೆಳತೀ' ಎನ್ನುತ್ತಾನಾತ 'ನಿನ್ನ ಕಣ್ಣುಗಳನ್ನು ವರ್ಣಿಸಲು ನೂರು ವರ್ಷ ಬೇಕು. ಉಳಿದೆಲ್ಲ ಅಂಗಗಳ ಬಗ್ಗೆ ಹೇಳಲು ಇನ್ನೂ ಮೂವತ್ತು ಸಾವಿರ ವರ್ಷ! ಈ ಪರಿಯ ಹೊಗಳಿಕೆ ನಿನಗೆ ಹೆಚ್ಚೇನಲ್ಲ. ಹಾಗೇಯೇ ನನ್ನ ಪ್ರೀತಿಯೂ ಕಡಿಮೆಯೇನಲ್ಲ' ಎನ್ನತ್ತಾನೆ ಅವನು. ಆದರೆ ಅವನಿಗೆ ಕಾಲನ ನಶ್ವ'ರತೆ ಬಗ್ಗೆ ಗೊತ್ತು. ಸಮಯದ ಹಾರುವ ರಥ ತಮ್ಮನ್ನು ಸಮೀಪಿಸುತ್ತಿರುವ ಸದ್ದನ್ನು ಬೆನ್ನ ಹಿಂದೆಯೇ ಆತ ಕೇಳಬಲ್ಲ. ಅನಂತತೆಯ ಮರುಳುಗಾಡಲ್ಲಿ ಸಮಯ ನಮ್ಮನ್ನು ಹೂತುಬಿಡುವ ಮುನ್ನ, ಕಾಪಿಟ್ಟುಕೊಂಡ ನಿನ್ನ ಕನ್ಯತ್ವವನ್ನು ಮಣ್ಣಿನ ಹುಳಗಳು ನಾಶಮಾಡುವ ಮುನ್ನ ಈ ಲಭ್ಯ ಸಮಯದಲ್ಲೇ ಒಂದಾಗೋಣ, ಪ್ರೀತಿಸೋಣ' ಎಂದಾತ ಹೇಳುತ್ತಾನೆ.

ಹದಿನೇಳನೇ ಶತಮಾನದ ಖ್ಯಾತ ಇಂಗ್ಲೀಷ್ ಕವಿ ಆ್ಯಂಡ್ರೂ ಮಾರ್ವೆಲ್‌ನ 'ಟು ಹಿಸ್ ಕಾಯ್ ಮಿಸ್ಟೆಸ್' ಎಂಬ ಈ ಕವನ ಬಹು ಜನಪ್ರಿಯವಾದದ್ದು. ತರಗತಿಗಳಲ್ಲಿ ಪಠ್ಯವಾಗುತ್ತಲೇ ಇರುವ ಈ ಪದ್ಯದ ಬಗ್ಗೆ ಇಂಗ್ಲೀಷ್‌ಗೆ ಸಂಬಂಧಪಟ್ಟ ಒಂದಲ್ಲ ಒಂದು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಶ್ನೆಗಳು ಬರುತ್ತಲೇ ಇರುತ್ತವೆ. ಈ ಕೆಳಗಿನ ಬಗ್ಗೆ ಏಕೆ ಪ್ರಸ್ತಾಪಿಸಲಾಗಿದೆ ಎಂದರೆ ಇದು ಕಾರ್ಪೆ ಡಿಯೆಮ್ (CARPEDIEM) ಸಿದ್ಧಾಂತಕ್ಕೆ ಸಂಬಂಧಿಸಿದ್ದು, ಇದೊಂದು ಲ್ಯಾಟಿನ್ ನುಡಿಗಟ್ಟು. ಕ್ರಿಸ್ತಪೂರ್ವ 23ನೇ ಶತಮಾನದಲ್ಲಿ ಪ್ರಸಿದ್ಧ ರೋಮನ್ ಕವಿ ಹೊರೇಸ್ ತನ್ನ ಕವನವೊಂದರಲ್ಲಿ ಇದನ್ನು ಬಳಸಿದ್ದ. ಇದರರ್ಥ ದಿನವನ್ನು ಸಮರ್ಪಕವಾಗಿ ಉಪಯೋಗಿಸು, ಆನಂದಿಸು, ಕೈಯಲ್ಲಿರುವ ಈ ಕ್ಷಣವನ್ನು ಅನುಭವಿಸು ಎಂದು. ನಾಳೆಯನ್ನು ಸಾಧ್ಯವಾದಷ್ಟು ಕಡಿಮೆ ನಂಬು ಎಂದ ಹೊರೇಸ್ ಹೇಳುತ್ತಾನೆ.

ಬದುಕು ಇನ್ನೆಲ್ಲೂ ಇಲ್ಲ. ಅದು ಈ ಕ್ಷಣ ನಿನ್ನ ಕಣ್ಣೆದುರು ಹಾರುವ ಚಿಟ್ಟೆಯ ರಂಗುರಂಗಿನ ರೆಕ್ಕೆಯಲ್ಲಿದೆ, ಈಗತಾನೇ ನೀನು ಕುಡಿಯಲು ಕೈಗೆತ್ತಿಕೊಂಡಿರುವ ಬಿಸಿಬಿಸಿ ಚಹಾದ ಕಪ್ಪಿನಿಂದ ಹೊರಬರುತ್ತಿರುವ ಹಬೆಯಲ್ಲಿದೆ ಎಂಬ ಅತ್ಯಂತ ಪುಟ್ಟ ಸತ್ಯದಿಂದ 'ಮಾನವ ಜನ್ಮ ದೊಡ್ಡದು ಅದನ್ನು ಹಾಳು ಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ' ಎಂಬ ವಿಶಾಲಾರ್ಥದ ಮಾತಿನವರೆಗೂ ಕಾರ್ಪೆ ಡಿಯೆಮ್ಮನ್ನು ವಿಸ್ತರಿಸಬಹುದು.

ಈ ಕ್ಷಣದಲ್ಲಿ ಬದುಕುವುದು ಎಂಬುದನ್ನು ಇಂದಿನ ಯುವ ಜನತೆಗಿಂತ ಚೆನ್ನಾಗಿ ಆದರೆ ತಪ್ಪಾಗಿ ಅರ್ಥ ಮಾಡಿಕೊಂಡವರು ಬೇರೆ ಯಾರೂ ಇಲ್ಲವೇನೋ. ವಯಸ್ಕರು ನಿನ್ನೆಗಳನ್ನು ನೆನೆಯುತ್ತಾ ನಾಳೆಗಳಿಗಾಗಿ ಹೆದರುತ್ತಾ ವರ್ತಮಾನವನ್ನು ಕಳೆಯುತ್ತಿದ್ದಾರೆ. ಇಂದಿನ ದಿನವನ್ನು ಕಠಿಣ ಪರಿಶ್ರಮದ ಮೂಲಕ ಸದುಪಯೋಗಪಡಿಸಿಕೊಂಡು ಬಾಳನ್ನು ಬಂಗಾರವಾಗಿಸಿಕೊಳ್ಳಬೇಕಾದ ವಿದ್ಯಾರ್ಥಿ ಸಮೂಹ ಮೊಬೈಲು, ಯುಟ್ಯೂಬ್, ಪಾರ್ಟಿ, ಐಪಿಎಲ್, ಮೇಕಪ್ಪುಗಳ ಕೊನೆಯಿರದ ರಂಗೀನ್ ದುನಿಯಾದಲ್ಲಿ ತನ್ನನ್ನ ತಾನು ಕಳೆದುಕೊಳ್ಳುತ್ತಿದೆ. ತನ್ನ ಪ್ರಮುಖ ಗುರಿಯನ್ನೇ ಮರೆತಿದೆ! ಕಾರ್ಪೆ ಡಿಯೆಮ್ಮನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳುವುದೆನೆಂದರೆ ಇದೇನೆ!

ಇದೇ ಅರ್ಥ ಕೊಡುವ ಪದವೊಂದು ಈಗ ಆಡುಮಾತಿನಲ್ಲಿ ಸೇರಿಕೊಳ್ಳುತ್ತಿದೆ. ಅದೇ ಯೋಲೋ (YOLO- You Only Live)!ನೀನು ಬದುಕಿರುವುದು ಒಂದೇ ಸಲ ಎಂಬುದು ಇದರರ್ಥ. ಈ ಪದ ನಮಗೆ ಹೊಸದೆನಿಸಿದರೂ ಪರಿಕಲ್ಪನೆ ನಮಗೆ ಹೊಸತೇನಲ್ಲ. ಅಪರೂಪಕ್ಕೆ ಗುಂಡು ಹಾಕುವವರನ್ನು ಹಿಡಿದು ಸಾಲಸೋಲ ಮಾಡಿ ಮಗಳ ಮದುವೆ ಮಾಡುವವರೆಗೆ ಎಲ್ಲರೂ ಅಯ್ಯೋ ಎಷ್ಟು ದಿನ ಬದುಕಿರ್ತೀವಿ, ಧಾಂಧೂಂ ಮಾಡಿಬಿಡೋಣ ಎನ್ನುವವರೇ! ಅತ್ಯಂತ ಅಪಾಯಕಾರಿ ಸಾಹಸ ಅಪರಾಧ ಮಾಡಹೊರಡುವವರೂ ಇದೇ ನೆಪವನ್ನು ಬೆನ್ನಿಗಿಟ್ಟುಕೊಂಡಿರುತ್ತಾರೆ.

ಮತ್ತೂ ಮಜವೆಂದರೆ ಈ ಸಿದ್ಧಾಂತವನ್ನು ಕೊಳ್ಳುಬಾಕ ಸಂಸ್ಕೃತಿ ತನ್ನ ತೆಕ್ಕೆಗೆ ಎಳೆದುಕೊಂಡು ಬಿಟ್ಟಿದೆ. ಇದು ಬಹು ಅಪಾಯಕಾರಿ. ನಾಳೆಯನ್ನು ಬಲ್ಲವರಾರು, ಸಾವು ಬೆನ್ನ ಹಿಂದೆಯೇ ಇದೆ, ಇವತ್ತಿನ ದಿನವನ್ನು ಅನುಭವಿಸೋಣ ಎಂಬುದು ಜನರ ಅಭಿಪ್ರಾಯ ತಾನೇ? ಆದರೆ ಹೇಗೆ? ಹೇಗೆಂದರೆ ಶಾಪಿಂಗ್ ಹೋಗುವ ಮೂಲಕ ಎಂಬ ಮನೋಭಾವವನ್ನು ಕಂಪನಿಗಳು ಟಿವಿ ಮೂಲಕ ಹುಟ್ಟುಹಾಕಿವೆ! ಬೆಂಗಳೂರಿನಲ್ಲಿ ನೆಲೆಸಿರುವವ ನನ್ನ ಸ್ನೇಹಿತೆಯೊಬ್ಬಳ ನೆರೆಮನೆಯಾಕೆಯ ಪ್ರತಿದಿನದ ಕೆಲಸವೆಂದರೆ ಮಾಲ್ ತಿರುಗುವುದು. ಬೆಳಗಿನ ತಿಂಡಿಗಳೇ ಮಕ್ಕಳಿಗೆ ಬ್ರೆಡ್ ಬಿಸ್ಕತ್ತು ಕೊಟ್ಟು ಕೈಲೊಂದು ಚಾಕಲೇಟು ಹಿಡಿಸಿ ಅವರನ್ನೂ ಕಟ್ಟಿಕೊಂಡು ಕಂಡ ಕಂಡ ಮಾಲ್‌ಗಳನ್ನು ಸುತ್ತುತ್ತ ಇರುವುದು! ವಾರದಲ್ಲಿ ಕನಿಷ್ಠ ಐದು ದಿನ ಹೋಗದಿದ್ದರೆ ಅವರಿಗೆ ತಿಂದ ಅನ್ನ ಕರಗುವುದಿಲ್ಲ! ಯಾವ ಮಾಲ್‌ನಲ್ಲಿ ಯಾವ ಆಫರ್ ಇದೆ, ಯಾವ ಏರಿಯಾದಲ್ಲಿ ಏನು ಸೇಲ್ ಇದೆ ಎಂಬ ಎಲ್ಲ ಮಾಹಿತಿ ಅವರ ಹತ್ತಿರ ಇರುತ್ತದೆ!

ವಾರದ ಐದು, ಆರು ದಿನ ಕೆಲಸ ಮಾಡುವುದೆನೆಂದರೆ ರೌರವ ನರಕದೊಳಗೆ ಹೋಗಿಬಂದಂತೆ ಎಂಬ ಅಭಿಪ್ರಾಯವನ್ನು ವಿಭಿನ್ನ ಬಗೆಯಲ್ಲಿ ನಮ್ಮ ಮಿದುಳಿನಲ್ಲಿ ತುಂಬುವುದಕ್ಕೆ ಕಾರಣಗಳೇನು ಗೊತ್ತೇ? ಕೆಲಸವೆಂದರೆ ಒತ್ತಡ, ಅದರಿಂದ ಪಾರಾಗಲು ವೀಕೆಂಡ್‌ನಲ್ಲಿ ಹೊರಗಡೆ ಹೋಗುವುದು, ತಿನ್ನುವುದು, ಷಾಪಿಂಗ್ ಮಾಡುವುದು ಅನಿವಾರ್ಯವೆಂಬ ಭಾವನೆ ಮೂಡಿಸಲು! ಅಲ್ಲ, ಕೋಟ್ಯಾಂತರ ಮಂದಿ ಕೆಲಸವಿಲ್ಲದೆ ಒದ್ದಾಡುವಾಗ ಕೆಲಸವಿರುವ ನಾವೇ ಪುಣ್ಯವಂತರೆಂದುಕೊಂಡು ಖುಷಿಯಿಂದ ಕಛೇರಿಗೆ ಹೋಗುವ ಬದಲು ಅದನ್ನು ಒತ್ತಡ ಎಂದುಕೊಳ್ಳುವವರು ಮೂರ್ಖರಲ್ಲವೇ? ಸಿಗುವ ವಾರಾಂತ್ಯದ ರಜೆಯನ್ನು ಆರಾಮಾಗಿ ನಮ್ಮಮನೆ ಕೆಲಸ ಮಾಡಿಕೊಳ್ಳುತ್ತ ಕುಟುಂಬದೊಂದಿಗೆ ಮನೆಯಲ್ಲಿ ಕಳೆಯುವುದು ಎಷ್ಟು ರಿಲಾಕ್ಸಿಂಗ್ ಅಲ್ಲವೇ? ಆದರೆ ಈ ರೀತಿ ಅಂದುಕೊಳ್ಳಲು ನಮ್ಮನ್ನು ನಿಯಂತ್ರಿಸುತ್ತಿರುವ ವರ್ಚುವಲ್ ಜಗತ್ತು ಬಿಡುವುದೇ ಇಲ್ಲ. ಫೇಸ್ಬುಕ್, ವಾಟ್ಸಆ್ಯಪ್, ಟಿವಿ ಇವೆಲ್ಲವುಗಳ ಮೂಲಕ ನೆಮ್ಮದಿ ಎಂದರೆ ಇದೇ, ವಿಶ್ರಾಂತಿ ಎಂದರೆ ಹೀಗೇ ಎಂಬ ಸುಳ್ಳು ನಂಬಿಕೆಗಳನ್ನು ನಮ್ಮ ಮೇಲೆ ದಿನದಿನವೂ ಹೇರಲಾಗುತ್ತಿದೆ. ಶನಿವಾರವೆಂದರೆ ನಗುವ ಸೋಮವಾರವೆಂದರೆ ಅಳುವ ಮುದ್ದು ಮಗುವಿನ ಚಿತ್ರ ನಿಮ್ಮ ಮೊಬೈಲ್‌ಗೆ ಬಂದಿದೆ ತಾನೇ? ಈ ಚಿತ್ರವೂ ಒಂದು ದೊಡ್ಡ ಯೋಜನೆಯ ಭಾಗವೇ!

ಮತ್ತು ಟಿವಿ ಮುಂದೆ ಆರಾಮಾಗಿ ಕೂತು ಕುರುಕಲು ತಿಂಡಿ ತಿನ್ನುತ್ತ ರಿಮೋಟ್ ಕೈಯಲ್ಲಿ ಹಿಡಿದು ನಿಮಿಷಕ್ಕೆ ನೂರು ಚಾನೆಲ್ ಬದಲಾಯಿಸುವುದು ಹೇಗೋ ಜೀವನವನ್ನು ಎಂಜಾಯ್ ಮಾಡುವುದೆಂದು ಎಲ್ಲರೂ ತಪ್ಪು

ತಿಳಿದುಕೊಂಡು ಆಗಿಬಿಟ್ಟಿದೆ! ಸಮಯ ಸಿಕ್ಕಾಗಲೆಲ್ಲ ಟಿವಿಯ ಮುಂದೆ ಬಿಟ್ಟು ಸಮಯ ಮಾಡಿಕೊಳ್ಳುವವರು ಒಟ್ಟಿನಲ್ಲಿ ಮೂರ್ಖರ ಪೆಟ್ಟಿಗೆಗೆ ದಾಸರಾಗಿರುವವರ ಸಂಖ್ಯೆ ಬಹಳ ದೊಡ್ಡದು.

ಇತ್ತೀಚೆಗೆ ವಾಟ್ಸ್‌ಆ್ಯಪ್‌ನಲ್ಲಿ ಬಂದ ಚಿತ್ರವೊಂದು ಗಮನ ಸೆಳೆಯಿತು. ಅದು ಬಿಜೆಪಿ, ಕಾಂಗ್ರೆಸ್, ಆಪ್ ಪಕ್ಷಗಳ ವಕ್ತಾರೆಯರು ಒಟ್ಟಿಗೆ ಕತಾರ್‌ನಲ್ಲಿ ರಜೆಯ ಮಜಾ ಅನುಭವಿಸುತ್ತಿರುವ ಚಿತ್ರ. ಯಾರಿಗಾದರೂ ಆಶ್ಚರ್ಯ ಸಹಜವೇ. ದೂರದರ್ಶನದ ಚರ್ಚೆಗಳಲ್ಲಿ ಹಾವು – ಮುಂಗುಸಿಗಳಂತೆ ಕಿತ್ತಾಡುವವರು ಸ್ವಂತ ಅಕ್ಕ– ತಂಗಿಯರಂತೆ ಪ್ರವಾಸ ಹೋಗಿದ್ದಾರೆ! ವೇದಿಕೆಯ ಮೇಲೆ ಒಬ್ಬರನ್ನೊಬ್ಬರು ಅತ್ಯಂತ ಕೀಳಾಗಿ ಬೈದುಕೊಳ್ಳುವ ನಮ್ಮ ರಾಜಕಾರಣಿಗಳೂ ಒಂದಲ್ಲ ಒಂದು ಸಮಯದಲ್ಲಿ ಜತೆಯಾಗಿರುತ್ತಾರೆ, ಮಾಧ್ಯಮಗಳಿಗೆ ಪೋಟೋ ಪೋಸು ಕೊಡುತ್ತಾರೆ. ಆದರೆ ನಾವು ನೀವು ಮಾತ್ರ ಇವರ ಚರ್ಚೆಗಳನ್ನು, ಪರಸ್ಪರ ಕಿತ್ತಾಡುತ್ತ ವಿಷ ಕಾರುತ್ತಿರುತ್ತೇವೆ. ನಮ್ಮ ಜಗಳಕ್ಕೆ ಕಾರಣರಾದವರು ಮಾತ್ರ ಸದ್ದೇ ಇಲ್ಲದೆ ತಮ್ಮ ಭತ್ಯೆಯನ್ನು ಮುನ್ನೂರು ಪಟ್ಟು ಹೆಚ್ಚಿಸಿಕೊಂಡು ಒಟ್ಟಿಗೆ ಸಂಭ್ರಮಾಚರಣೆ ಮಾಡುತ್ತಿರುತ್ತಾರೆ.

ಕೈಲಿರುವ ಕ್ಷಣವನ್ನು ಸದುಪಯೋಗ ಪಡಿಸಿಕೊಳ್ಳುವುದನ್ನು ಕಲಿಯುವುದು ಎಂದರೆ ಬರೀ ತಿನ್ನುವುದು, ತಿರುಗುವುದು, ಮಜಾ ಮಾಡುವುದು ಮಾತ್ರವಲ್ಲ. ಸಾವಿರ ಹೆಜ್ಜೆಗಳ ಪಯಣ ಮೊದಲ ಹೆಜ್ಜೆಯಿಟ್ಟರೆ ಮಾತ್ರ ಪ್ರಾರಂಭವಾಗುವಂತೆ ದೊಡ್ಡ ಗುರಿಯೊಂದನ್ನು ಆರಂಭಿಸಲು ಈ ಕ್ಷಣವೇ ಅತ್ಯುತ್ತಮವಲ್ಲವೇ? ಹಳೆಯದನ್ನು ಮರೆತು ಹೊಸ ಬದುಕು ಆರಂಭಿಸಲು ಈ ದಿನಕ್ಕಿಂತ ಒಳ್ಳೆಯ ದಿನ ಇನ್ನ್ಯಾವುದಿದೆ? ನಿತ್ಯ ಚಲನಶೀಲವಾಗಿರುವ ಜಗತ್ತಿನಲ್ಲಿ ನೋವು–ದುಃಖಗಳ ಹೊರೆಯನ್ನು ಇಳಿಸಿ ನಮ್ಮಿಂದ ಬದಲಾಯಿಸಲಾಗದ ಸಂಗತಿಗಳನ್ನು ಅಲ್ಲಿಯೇ ಬಿಟ್ಟು ಒಂದು ದೀರ್ಘ ಉಸಿರೆಳೆದುಕೊಂಡು ಹೊಸ ಭರವಸೆಯೊಂದಿಗೆ ಮುನ್ನಡೆಯಲು ಈ ಸಮಯವೇ ಒಳ್ಳೇಯದಲ್ಲವೇ? ಅಷ್ಟೇ ಅಲ್ಲ, ಮಾಡುವ ಕೆಲಸದಲ್ಲಿ ನಮ್ಮ ಮನಸ್ಸನ್ನು ಪೂರ್ತಿಯಾಗಿ ತೊಡಗಿಸುವದು ಕೂಡ ಆ ಕ್ಷಣವನ್ನು ಸಮಪರ್ಕವಾಗಿ ಬಳಸಿಕೊಂಡಂತೆಯೇ! ಈ ಕ್ಷಣವೆಂದರೆ ಬದುಕಿನ ನಶ್ವರತೆಯನ್ನೂ ಅಪಾರ ಸಾಧ್ಯತೆಗಳನ್ನು ಒಟ್ಟಿಗೇ ಧ್ವನಿಸುವ ವಿಶಿಷ್ಟ ಸಮಯ. ಅದನ್ನು ಹೇಗೆ ಅರ್ಥ ಮಾಡಿಕೊಳ್ಳುತ್ತೇವೆನ್ನುವುದೇ ನಮ್ಮ ಬದುಕನ್ನು ನಿರ್ದೇಶಿಸುವ ಸಂಗತಿ.

**2) ಈ ಲೇಖನವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. 10**

**'ನೂರ್ಕಾಲ ಬದುಕು ಅನ್ನಬಾರದು'**

ಮಾಸ್ತಿಯವರು ಆರು ಹೆಣ್ಣು ಮಕ್ಕಳ ತಂದೆ. ಇಂದಿರಮ್ಮ ಶ್ರೀರಂಗನಾಯಕಮ್ಮ, ಪದ್ಮಮ್ಮ, ಅರವಿಂದಮ್ಮ, ವಿಜಯವಲ್ಲಿ, ಶಾಂತಮ್ಮ – ಇವು ಮಾಸ್ತಿಯವರ ಹೆಣ್ಣುಮಕ್ಕಳ ಹೆಸರುಗಳು.

ಇವರ ಪೈಕಿ ಎರಡನೆಯ ಮಗಳಾಗಿದ್ದ ವಿಜಯವಲ್ಲಿಯನ್ನು ಕಂಡರೆ ಮಾಸ್ತಿಯವರಿಗೆ ಮಹಾಪ್ರಾಣ. ಕಾರಣವಿಷ್ಟೆ ವಿಜಯವಲ್ಲಿ ವಿದ್ಯಾವಂತೆ ; ಚಾಣಾಕ್ಷೆ ಕಲಾವಿದೆ. ಧಾರವಾಡ ಬಾನುಲಿ ಕೇಂದ್ರದಲ್ಲಿ ದಶಕಕ್ಕೂ ಮೀರಿ ನಾನಾ ಹುದ್ದೆಯಲ್ಲಿ ಸೇವೆ ಸಲ್ಲಿಸಿ ಎಲ್ಲರ ಪ್ರಶಂಸೆ ಪ್ರೀತಿಗೆ ಪಾತ್ರಳಾಗಿದ್ದ ಸುಸಂಸ್ಕೃತ ಹೆಣ್ಣು ವಿಜಯವಲ್ಲಿ. ಅಲ್ಲದೆ ಈಕೆ ಅಲ್ಲಿದ್ದುದರಿಂದ ಮಾಸ್ತಿಯವರು ಮೇಲಿಂದ ಮೇಲೆ ಧಾರವಾಡಕ್ಕೆ ಹೋಗಿ, ಮಗಳ ಮನೆಯಲ್ಲಿ ಕೆಲಕಾಲ ಕ್ಯಾಂಪ್ ಹೂಡಿ, ಅಲ್ಲಿರುತ್ತಿದ್ದ ಸಾಹಿತಿ ಸಾರಸ್ವತರ ಸಂಗ ಸ್ನೇಹ ಸವಿದು ಸಂತೋಷದಿಂದ ಹಿಂದಿರುಗುತ್ತಿದ್ದರು. ಮಾಸ್ತಿಯವರಿಗೆ ಮನಸ್ಸಿಗೆ ಮಬ್ಬು ಕವಿದಂತಾಗಲೆಲ್ಲಾ ಕಂಡು ಗೆಲುವಾಗಲು ಅವರು ಧಾವಿಸುತ್ತಿದ್ದುದು ವಿಜಯವಲ್ಲಿಯ ಧಾರವಾಡದ ಮನೆಗೆ.

ಅಲ್ಲೂ ಅಷ್ಟೆ, ಮಾಸ್ತಿಯವರು ಮಗಳ ಮನೆಯಲ್ಲಿ ಮೊಕ್ಕಾಂ ಮಾಡಿದ್ದಾರೆಂದರೆ ಮುಗಿಯಿತು. ಅವರಲ್ಲಿ ಇರುತ್ತಿದ್ದಷ್ಟು ಕಾಲವೂ ವಿಜಯವಲ್ಲಿಯ ಮನೆಯಲ್ಲಿ ಸಂಜೆಯಾಗುತ್ತಲೆ ಸಾಹಿತಿಗಳ ಸಂಗಮ, ಸಮಾಗಮ. ದಿನನಿತ್ಯವೂ ಪುಟ್ಟ ಪ್ರಮಾಣದಲ್ಲಿ ಸಾಹಿತ್ಯ ಸಮ್ಮೇಳನ! ಹಾಗೆ ಪ್ರಾಸಂಗಿಕವಾಗಿ ನಡೆಯುತ್ತಿದ್ದ ದಿನ ನಿತ್ಯದ ಅಂತಹ ಸ್ಮಾಲ್ ಸ್ಕೇಲ್ ಸಮ್ಮೇಳನಗಳಿಗೆ ಮಾಸ್ತಿಯವರದ್ದೇ ಅಧ್ಯಕ್ಷತೆ. ಅವರಿಗೇ ಆ ಅಗ್ರ ಪೀಠ! ಅಲ್ಲದೆ ಮಾಸ್ತಿಯವರಿಗೆ ಅಲ್ಲೂ ದಿನನಿತ್ಯ ಎಡಬಿಡದ ಕಾರ್ಯಕ್ರಮ, ಅಲ್ಲಿಯ ಶಾಲಾ ಕಾಲೇಜು ಸಂಘ ಸಂಸ್ಥೆಗಳಲ್ಲಿ ಭಾಷಣ.

ಹೀಗಾಗಿ ಮಾಸ್ತಿಯವರಿಗೆ ವಿಜಯವಲ್ಲಿಯ ಸಾನಿಧ್ಯ ಹಾಗೂ ಧಾರವಾಡದ ನೆಂಟು ಅಂಟು ಇತ್ತಷ್ಟು ಸಂತೋಷ ಸಂತೃಪ್ತಿ ಮತ್ತೆಲ್ಲಿಯೂ ಸಿಕ್ಕಿರಲಾರದು.

ಮಾಸ್ತಿಯವರು ಇಷ್ಟರ ಮಟ್ಟಿಗೆ ಹಚ್ಚಿ ಕೊಂಡಿದ್ದ ಮೆಚ್ಚಿನ ಮುದ್ದಿನ ಮಗಳು ವಿಜಯವಲ್ಲಿಗೆ ಪಿಂಡ ಬಯಸುವ ಕೆಂಡಸರದ ಖಾಯಿಲೆ ಅಟಕಾಯಿಸಿಕೊಳ್ಳಬೇಕೇ! ಆ ರೋಗದಲ್ಲೇ ನರಳಿ ಅದೊಂದು ದಿನ ವಿಜಯವಲ್ಲಿ ತನ್ನನ್ನು ನೆಚ್ಚಿದವರನ್ನೆಲ್ಲ ತೊರೆದು ಮತ್ತೆ ಹಿಂದಿರುಗಿ ಬರಲಾರದೆಡೆಗೆ ನಡೆದುಬಿಟ್ಟಳು!

ಅಂದು ಮಸಣದಂತೆ ಮಂಕಾಗಿದ್ದ ಮಾಸ್ತಿಯವರ ಮನೆಯ ಹಜಾರದ ನಡುವೆ ವಿಜಯವಲ್ಲಿಯ ಪಾರ್ಥಿವ ಶರೀರವನ್ನು ಚಾಪೆಯ ಮೇಲೆ ಮಲಗಿಸಿದ್ದರು. ಆ ಬೀದಿಯ ಹೆಂಗಸರೆಲ್ಲಾ ಬಂದು ವಿಜಯವಲ್ಲಿಯ ಹಣೆಗೆ ಕುಂಕುಮವಿಟ್ಟು ತಲೆಗೆ ಹೂಮುಡಿಸಿ ಕಣ್ಣೀರಿಡುತ್ತ ನಿಂತಿದ್ದರು.

ಮಗಳು ಕೊನೆಯುಸಿರೆಳೆಯುತ್ತಲೆ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿದ ತರಗೆಲೆಯಂತೆ ತತ್ತರಿಸಿ ಹೋಗಿದ್ದ ಮಾಸ್ತಿ ಹಜಾರದ ಮೂಲೆಯೊಂದರಲ್ಲಿ ಮುಖ ಮುದುಡಿಕೊಂಡು ಶಿಲಾವಿಗ್ರಹದಂತೆ ನಿಂತಿದ್ದರು, ತದೇಕ ಚಿತ್ತದಿಂದ, ಚಿರನಿದ್ರೆಯಲ್ಲಿ ಮಲಗಿರುವ ಮಗಳ ಮುಖವನ್ನೇ ದೀರ್ಘವಾಗಿ ದಿಟ್ಟಿಸುತ್ತ. ಎಷ್ಟೋ ಮಂದಿ ಬಂದರು, ಹೋದರು. ಮಾಸ್ತಿಯವರು ಮಾತ್ರ ಮೂಕ ವಿಸ್ಮಿತರಾಗಿ ಮೂಲೆಯಲ್ಲಿ ನಿಂತಿದ್ದರೇ ಹೊರತು ಬಂದ ಯಾರೊಡನೆಯೂ ಯಾವ ಮಾತನ್ನೂ ಆಡಲಿಲ್ಲ! ಗರ ಬಡಿದವರಂತೆ ನಿಂತಿದ್ದರು. "ವಿಜಯವಲ್ಲಿಯೇ ಇಲ್ಲವೆಂದ ಮೇಲೆ ಇನ್ನು ನನ್ನ ಪಾಲಿಗೆ ಎಲ್ಲವೂ ನಾಸ್ತಿ" ಎಂಬುವಂತಿತ್ತು ಮಾಸ್ತಿಯವರ ಮುಖಭಾವ.

ಅಂತಹ ದಾರುಣಮಯ ಸಂದರ್ಭಗಳಲ್ಲಿ ಲೋಕಕ್ಕೆ ಸಾಂತ್ವನ ಹೇಳುತ್ತಿದ್ದವರು ಮಾಸ್ತಿ. ಆದರೀಗ, ಮಾಸ್ತಿಯವರೆ ದುಃಖದ ಮಡುವಿನಲ್ಲಿ ಮುಳುಗಿರುವಾಗ ಅವರಿಗೆ ಸಮಾಧಾನ ಹೇಳುವ ಶಕ್ತಿಯಾಗಲೀ ಧೈರ್ಯವಾಗಲೀ ಯಾರಿಗೂ ಇರಲಿಲ್ಲ.

ಪರಿಸ್ಥಿತಿ ಹೀಗಿದ್ದಾಗ ಇಲ್ಲಿಗೆ ಡಾ॥ ಎಚ್.ಕೆ ರಂಗನಾಥ್ ಬಂದರು. ರಂಗನಾಥರೂ ಧಾರವಾಡದ ಬಾನುಲಿ ಕೇಂದ್ರದಲ್ಲಿ ವಿಜಯವಲ್ಲಿಯಂತೆಯೇ ಅನೇಕ ವರುಷ ಕೆಲಸ ಮಾಡಿದವರು. ವಿಜಯವಲ್ಲಿಗೆ ರಂಗನಾಥ್ ಸ್ವಂತ ಸಹೋದರನಿದ್ದಂತೆ. ಪುತ್ರ ಸಂತಾನವಿರದಿದ್ದ ಮಾಸ್ತಿಯವರಿಗೆ ಮಗನಿದ್ದಂತೆ. ಮಾಸ್ತಿಯವರ ಕುಟುಂಬದೊಡನೆ ರಂಗನಾಥರಿಗೆ ಅಂತಹ ಅಂಟು ನೆಂಟು, ಸ್ನೇಹ ಸಲುಗೆ, ಪ್ರೀತಿ, ವಾತ್ಸಲ್ಯ.

ಇಂತಹ ರಂಗನಾಥ್ ಇಲ್ಲಿಗೆ ಬಂದರು. ವಿಜಯವಲ್ಲಿಯ ಅಂತಿಮ ದರುಶನ ಪಡೆದದ್ದಾಯ್ತು. ಆಕೆಯ ಪಾರ್ಥಿವ ಶರೀರವನ್ನು ಕಂಡು ಕಣ್ಣೀರು ಒರೆಸಿಕೊಂಡದ್ದಾಯ್ತು. ನಂತರ ರಯಗನಾಥ್ ಮಾಸ್ತಿಯವರತ್ತ ತಿರುಗಿದರು. ಅವರತ್ತ ಹೋದರು. ಮಾಸ್ತಿಯವರ ಕೈಯನ್ನು ಮೃದುವಾಗಿ ಹಿಡಿದುಕೊಂಡರು. ಮೆದುವಾದ ಸ್ವರದಲ್ಲಿ 'ಸಮಾಧಾನ ಮಾಡ್ಕೊಳ್ಳಿ ಸರ್. ವಿಜಯವಲ್ಲಿ ಇಷ್ಟು ಬೇಗ ಹೋಗಬಾರದಿತ್ತು. ಇವಳ ಸಾವಿನಿಂದ ನಿಮಗೆ ಎಷ್ಟು ನಷ್ಟವಾಗಿದೇ ಅನ್ನೋದು ನಂಗೊತ್ತು ಸಾರ್. ಆದ್ರೆ ಏನ್ಸಾರ್ ಮಾಡೋಕ್ಕಾಗುತ್ತೆ? ಎಲ್ಲಾ ವಿಧಿ ನಿಯಮ. ನೀವು ಎಲ್ಲ ತಿಳಿದೋರು, ನಿಮಗೆ ಸಮಾಧಾನ ಹೇಳೋ ವಯಸ್ಸಾಗಲಿ, ಸ್ಥಾನ ಮಾನವಾಗಲಿ ನನಗಿಲ್ಲ ಸಾರ್, ದಯವಿಟ್ಟು ಸಮಾಧಾನ ಮಾಡ್ಕೊಳ್ಳಿ' ಎಂದು ಕೈ ಮುಗಿಯಲು ತಮ್ಮ ಕರವಸ್ತ್ರದಿಂದ ಕಣ್ಣೊರೆಸಿಕೊಂಡ ಮಾಸ್ತಿ ನಡುಗುವ ದನಿಯಲ್ಲಿ ತಡವರಿಸುತ್ತ 'ನೋಡೀಪ್ಪಾ ರಂಗನಾಥ್ ಹಿರಿಯರಾದ ನಾವು ನಮಗೆ ನಮಸ್ಕರಿಸುವವರಿಗೆಲ್ಲ ನೂರ್ಕಾಲ ಬದುಕಿ ಎಂದು ಪೂರ್ವಾಪರ ಯೋಚಿಸದೆ ಆಶೀರ್ವಾದ ಮಾಡಿಬಿಡುತ್ತೇವೆ. ನಮ್ಮ ಆಶೀರ್ವಾದ ಫಲಿಸಿ ವ್ಯಕ್ತಿಯೊಬ್ಬ ನೂರ್ಕಾಲ ಇರುವುದೇ ಆದರೆ, ಹೀಗೆಯೇ, ನಾವು ಇರುವಾಗಲೇ ನಮ್ಮವರು ಹೊರಟು ಹೋಗುವುದನ್ನು ಕಣ್ಣಾರೆ ಕಂಡು ಕಣ್ಣೀರಿಡುತ್ತ ಕೊರಗ ಬೇಕಾಗುತ್ತದೆ, ಈ ವಿಚಾರವನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ, ಯಾರೇ ಆಗಲಿ, ನೂರ್ಕಾಲ ಬದುಕುವುದು ಒಳ್ಳೇಯದಲ್ಲ' ಎನ್ನುತ್ತ ವಿಮುಖರಾಗಿ ಕಣ್ಣೊರೆಸಿಕೊಂಡರು!.

1. ವಿಜಯವಲ್ಲಿ ಅವರ ಸ್ವವಿವರವನ್ನು ಬರೆಯಿರಿ?
2. ಮಾಸ್ತಿಯವರ ಸಾಹಿತ್ಯ ಸಮ್ಮೇಳನ ಹೇಗಿರುತ್ತಿತ್ತು?
3. ಮುದ್ದಿನ ಮಗಳು ಚಿರನಿದ್ರೆಯಲ್ಲಿನ ಸಂದರ್ಭದಲ್ಲಿ ಮಾಸ್ತಿಯವರ ಮನಸ್ಥಿತಿ ಹೇಗಿತ್ತು?
4. ಡಾ॥ ಹೆಚ್.ಕೆ. ರಂಗನಾಥ್‌ರವರು ಮಾಸ್ತಿಯವರಿಗೆ ನುಡಿದ ಸಾಂತ್ವನದ ಮಾತುಗಳು.
5. ಮಾಸ್ತಿ ಅವರು ಹಿರಿಯರ ಆಶೀರ್ವಾದ ಕುರಿತು ಆಡಿದ ನುಡಿಗಳು.

**3) ಈ ಕೆಳಗಿನ ಗಾದೆಗಳನ್ನು ಸೂಚ್ಯಾರ್ಥ ಬರೆಯಿರಿ. 05**

1. ಹನಿಗೂಡಿದರೆ ಹಳ್ಳ, ತೆನೆಗೂಡಿದರೆ ಬಳ್ಳ.
2. ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು.
3. ಎತ್ತಿಗೆ ಜ್ವರ ಬಂದರೆ ಎಮ್ಮಗೆ ಬರೆ ಹಾಕಿದ.
4. ಹುಟ್ಟು ಗುಣ ಸುಟ್ಟರೂ ಹೋಗದು.
5. ರವಿ ಕಾಣದ್ದನ್ನು ಕವಿ ಕಂಡ.

4) A) ಕೆಳಗಿನ ಪದಗಳಿಗೆ ತದ್ಭವ ಬರೆಯಿರಿ. 05

1. ಸ್ವರ್ಗ   2. ಕ್ಷಣ   3. ಚಂದ್ರ   4. ಜ್ವರ   5. ತ್ಯಾಗ

B) 'ಪರಿಸರ' ಮಾಲಿನ್ಯ ಎಂಬ ವಿಷಯ ಕುರಿತು ನೂರು ಪದಗಳಿಗೆ ಮೀರದಂತೆ ಪ್ರಬಂದ ಬರೆಯಿರಿ. 05

# ಭಾಗ–ಬಿ

5) ಸೇವಾ ಮತ್ತು ಮರಣ ಉಪದಾನದ ಮಿತಿಯನ್ನು ರೂ.3.5 ಲಕ್ಷಗಳಿಂದ ರೂ.10.00 ಲಕ್ಷಗಳಿಗೆ ಹೆಚ್ಚಿಸುವ ನಿಗಮದ ಒಂದು ಕರಡು ಆದೇಶ ತಯಾರಿಸಿ. 10

6) ಅರ್ಹ ಅಧಿಕಾರಿಗಳಿಗೆ ವೈಯುಕ್ತಿಕ ವಾಹನಗಳ ಇಂಧನ ಮತ್ತು ನಿರ್ವಹಣೆ ಖರ್ಚಿಗಾಗಿ ತಿಂಗಳಿಗೆ ರೂ.17,000/– ಗಳಿಗೆ ಸೌಲಭ್ಯವನ್ನು ವಿಸ್ತರಿಸಿದ ಅನುಮೋದನೆಯ ನಿಗಮದ ಕರಡು ಆದೇಶವನ್ನು ಮಂಡಿಸಿ. 10

7) ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ಇವರಿಂದ ಕಛೇರಿ ಉಪಕರಣಗಳನ್ನು ಖರೀದಿಸುವ ಕುರಿತು ಒಂದು ಕರಡು ಸುತ್ತೋಲೆ ತಯಾರಿಸಿ. 10

8) ಕ.ವಿ.ಪ್ರ.ನಿ.ನಿ ಯ ಮುಖ್ಯ ಇಂಜಿನಿಯರ್ (ವಿ) ಪ್ರಸರಣ ವಲಯ,ಅಧೀಕ್ಷಕ ಇಂಜಿನಿಯರ್(ವಿ) ಕಾರ್ಯ ಮತ್ತು ನಿರ್ವಹಣೆ ವೃತ್ತ ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಟಿ.ಎಲ್ ಅಂಡ್ ಎಸ್.ಎಸ್/ಬೃಹತ್ ಕಾಮಗಾರಿ ಇವರಿಗೆ ಆರ್ಥಿಕ ಸಲಹೆಗಾರರಿಂದ ಅಂದಾಜು ಪಟ್ಟಿ ಮಂಜೂರಾತಿ ಕುರಿತು ಒಂದು ಕರಡು ಸುತ್ತೋಲೆ ಬರೆಯಿರಿ. 05

9) ಚೆಕ್ ವಿತರಣೆ ಭದ್ರತೆಯನ್ನು ಬಲಗೊಳಿಸುವ ಕುರಿತು ಕ.ವಿ.ಪ್ರ.ನಿ.ನಿ ನ ಎಲ್ಲಾ ಆರ್ಥಿಕ ಸಲಹೆಗಾರರು ಮತ್ತು ಲೆಕ್ಕ ನಿಯಂತ್ರಣಾಧಿಕಾರಿಗಳನ್ನು ಉದ್ದೇಶಿಸಿ ನಿಗಮದ ನಿರ್ದೇಶಕರು (ಆ ಮತ್ತು ಮಾ.ಸಂ.) ಇವರಿಂದ ಒಂದು ಸುತ್ತೋಲೆ ಕರಡು ತಯಾರಿಸಿ. 05

10) ಬೆವಿಕಂನ ಎಲ್ಲಾ ಕಾರ್ಯಪಾಲನಾ ಮುಖ್ಯ ಇಂಜಿನಿಯರ್‌ಗಳಿಗೆ ಪ್ರಧಾನ ವ್ಯವಸ್ಥಾಪಕರು (ಹಣಕಾಸು ಮತ್ತು ಜಕಾತಿ) ಇವರಿಂದ ಜಕಾತಿ ದರಪಟ್ಟಿ 2017ರ ಅನ್ವಯ ಗ್ರಾಹಕರಿಂದ ಪಡೆಯಬೇಕಾದ ನೂತನ ಠೇವಣಿ (2ಎಂ.ಎಂ.ಡಿ) ಕುರಿತು ಒಂದು ಕರಡು ಪತ್ರ ಹಾಗೂ ಮಾದರಿ ಕೋಷ್ಟಕ ಬರೆಯಿರಿ. 10

* * * * * * *